- - **ಸಿ.ಸಿ. ನಂ.2190/2024**

**ಪಿ. ಡಬ್ಲ್ಯೂ: 1**

**( ಇಂದು ದಿಃ 13/03/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಆರೋಪಿ ಪರ ಶ್ರೀ ಪಿಎಸ ಜಿ ವಕೀಲರಿಂದ,**

ನಾನು ಪಿರ್ಯಾದಿ ಸಂಸ್ಥೆಯಲ್ಲಿ ಕಳೆದ 10 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದೇನೆ. ಆರೋಪಿಗೆ ಮನೆ ರಿಪೇರಿಗಾಗಿ ರೂ.60,000 ಜಾಮೀನು ಸಾಲ ನೀಡಿರುತ್ತೇವೆ . ಸಾಲಕ್ಕೆ ಶೇಕಡಾ 10 ರಷ್ಟು ಬಡ್ಡಿ ವಿಧಿಸಿರುತ್ತೇವೆ. ಆರೋಪಿಗೆ ವಕೀಲರ ಮೂಲಕ ನೀಡಿದ ನೊಟೀಸು ತಲುಪಿರುತ್ತದೆ. ಸಾಲ ನೀಡುವ ಕಾಲಕ್ಕೆ ಆರೋಪಿಯಿಂದ ಆದಾರಕಾರ್ಡ, ಪಾನ್ ಕಾರ್ಡ, ರೇಶನ್ ಕಾರ್ಡ ಪಡೆದಿರುತ್ತೇವೆ. ಸಾಲದ ಅರ್ಜಿಯನ್ನು ನಮ್ಮ ಸಿಬ್ಬಂದಿಗಳು ಭರ್ತಿ ಮಾಡಿರುತ್ತಾರೆ. ಆರೋಪಿ ನಾವು ಹೇಳಿದ ಜಾಗದಲ್ಲಿ ಅರ್ಜಿಯಲ್ಲಿ ಸಹಿ ಮಾಡಿರುತ್ತಾರೆ. ಆರೋಪಿಯಿಂದ ಭದ್ರತೆಗಾಗಿ ಚೆಕ್ಕನ್ನು ಪಡೆದಿಲ್ಲಾ. ಚೆಕ್ಕಿನ ಮೇಲೆ ಇರುವ ಬರವಣಿಗೆ ಮತ್ತು ಶಾಹಿಯಲ್ಲಿ ವ್ಯತ್ಯಾಸ ಕಂಡುಬರುತ್ತಿದೆ ಎಂದರೆ ಸಾಕ್ಷಿಯು ಆರೋಪಿ ಚೆಕ್ಕನ್ನು ಮನೆಯಿಂದ ಬರೆದು ತಂದಿದ್ದರೆಂದು ಉತ್ತರ ನೀಡಿರುತ್ತಾರೆ. ಆರೋಪಿ 4 ಕಂತುಗಳನ್ನು ತುಂಬಿರತ್ತಾರೆ. ಆರೋಪಿಯಿಂದ ರೂ. 61,000 ಭರಿಸಲು ಬಾಕಿ ಇದೆ. ಆರೋಪಿ ಸಂಪೂರ್ಣ ಸಾಲವನ್ನು ಚುಕ್ತಾ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಂಪೂರ್ಣ ಸಾಲ ಮರುಪಾವತಿ ಮಾಡಿದ್ದರೂ ಸಹ ಭದ್ರತೆಗಾಗಿ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿ ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೂ ಸದರಿ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲಾ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**